# ಕಮಲಜನು ನಿನ್ನ ಪಾದ ಕಮಲವನು ತೊಳೆದಿಹನು

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 180.
2. **Ref.:** Samagra Dasa Sahity, Samputa 4, published by Kannada & Culture Dept, Govt of Karnataka, Bengaluru, page No. 119.
3. **Note:** This song is not available in the books of Sri. Pavanje Guru Rao and also in the books of Prof. S.K. Ramachandra Rao and also in the books of Gorebala Hanumantha Rayaru.

ಕಮಲಜನು ನಿನ್ನ ಪಾದ–ಕಮಲವನು ತೊಳೆದಿಹನು

ಉಮಾಪತಿಯು ನಿನ್ನ ಪಾದ ಜಲವ ಪೊತ್ತಿಹನು

ಯಮಜ ಮಾಡುವ ರಾಜಸೂಯ ಯಾಗದಲ್ಲಿ

ಮಮಕರಿಸಿದೆ ಎಂತೊ ಕಾಲ ತೊಳೆವ ಊಳಿಗವ ?

ಮಮ ಪ್ರಾಣಾ ಹಿ ಪಾಂಡವಾ: ಎಂಬ ಬಿರುದಿಗಾಗಿ

ನಮೋ ನಮೋ ಎಂಬೆ ಪುರಂದರ ವಿಠಲ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಶ್ರೀಹರಿ ಭಕ್ತರ ಭಕ್ತನೆಂದು ಈ ಉಗಾಭೋಗದಲ್ಲಿ ಸೋದಾಹರಣವಾಗಿ ಹೇಳಲಾಗಿದೆ.

**ಕಮಲಜ** = ಬ್ರಹ್ಮ

**ಉಮಾಪತಿ ..... ಪೊತ್ತಿಹನು : -** ವಿಷ್ಣುವಿನ ಪಾದದಿಂದ ಹುಟ್ಟಿದ ಗಂಗೆಯನ್ನು ಶಿವನು ತಲೆಯಮೇಲೆ ಧರಿಸಿಕೊಂಡಿದ್ದಾನೆ.

**ಯಮಜ** = ಧರ್ಮರಾಜ

**ಮಮಕಾರಿಸು =** ಒಪ್ಪಿಕೊಳ್ಳು

**ರಾಜಸೂಯ : -** ಪಾಂಡುರಾಜನ ಸೂಚನೆಯಂತೆ ನಾರದನ ಉಪದೇಶದಿಂದ ಧರ್ಮರಾಜನು ಇಂದ್ರಪ್ರಸ್ಥದಲ್ಲಿ ಮಾಡಿದ ಒಂದು ಮಹಾ ಯಜ್ಞ. (ಭಾರ. ಸಭಾ. ೩೮)

ಮಮಪ್ರಾಣಾಹಿ ಪಾಂಡವಾ:

**Classification:** Ugabhoga
**Ankita:** purandara vittala
**Location:** NA
**Category:** Mahatmya Jnana
**Sub-Category:** brahma, padma, shiva, niru, pandava, yagna,
**Pravachana:** NA
**Explanation:** NA